**ಸಾಕ್ಷಿಗೆ ದಿನಾಂಕಃ08-09-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಮುಂದುವರೆದ ಪಾಟೀ ಸವಾಲು :: ಪ್ರತಿವಾದಿ ಪರ ಶ್ರೀಮತಿ ಹೆಚ್ ಬಿ ವಕೀಲರಿಂದ ::**

ಪ್ರಭಯ್ಯ ಎನ್ನುವವರು ನನ್ನ ಅಜ್ಜ ಆಗಿರುತ್ತಾರೆ ಎಂದರೆ ಸರಿ. ಅವರ ಮೂರು ಮಕ್ಕಳಲ್ಲಿ ನಂಜಯ್ಯ ಸಹ ಒಬ್ಬರು ಆಗಿರುತ್ತಾರೆ ಎಂದರೆ ಸರಿ. ಪ್ರತಿವಾದಿಗೆ ರಾಜಶೇಖರಯ್ಯ ರವರು ಜಮೀನು ಅನ್ನು ಮಾರಾಟ ಮಾಡಿರುತ್ತಾರೆ. ಸದರಿ ರಾಜಶೇಖರಯ್ಯ ರವರಿಗೆ ಪ್ರಭಯ್ಯ ರವರು ಒಂದು ವಿಲ್ ಮಾಡಿಕೊಟ್ಟಿದ್ದರು ಎಂದರೆ ಸರಿ. ಸದರಿ ವಿಲ್ ನ ಆಧಾರದಲ್ಲಿ ರಾಜಶೇಖರಯ್ಯ ರವರು ದಾವಾ ಸರ್ವೇ ನಂಬರ್ ನಲ್ಲಿನ 3 ಎಕರೆ ಆಸ್ತಿಗೆ ಮಾಲೀಕರಾಗಿದ್ದರು ಎಂದರೆ ಸಾಕ್ಷಿಯು 4 ಎಕರೆಗೆ ಮಾಲೀಕರಾಗಿದ್ದರು ಎಂದು ನುಡಿಯುತ್ತಾರೆ. ಸದರಿ ರಾಜಶೇಖರಯ್ಯ ರವರು ಪ್ರತಿವಾದಿಗೆ 2 ಎಕರೆ 30 ಗುಂಟೆ ಜಮೀನು ಅನ್ನು ಮಾರಾಟ ಮಾಡಿದ್ದರು. ಉಳಿಕೆ ಜಮೀನು ರಾಜಶೇಖರಯ್ಯ ರವರ ಹೆಸರಿನಲ್ಲೇ ಉಳಿದಿತ್ತು ಎಂದರೆ ಸರಿ. ದಾವಾ ಬಿ ಸ್ವತ್ತನ್ನು ರಾಜಶೇಖರಯ್ಯ ರವರು ಒತ್ತುವರಿ ಮಾಡಿರುತ್ತಾರೋ ಅಥವಾ ಪ್ರತಿವಾದಿ ಒತ್ತುವರಿ ಮಾಡಿರುತ್ತಾರೋ ಒಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿ ಮಂಜುನಾಥ ರವರು ಒತ್ತುವರಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಆಸ್ತಿಯನ್ನು ರಾಜಶೇಖರಯ್ಯ ರವರು ಅಥವಾ ಪ್ರತಿವರಾದಿ ಒತ್ತುವರಿ ಮಾಡಿರುತ್ತಾರೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿಯ ಸರ್ವೇಯರ್ ರವರ ವರದಿ ಪ್ರಕಾರ ಪ್ರತಿವಾದಿಯೇ ಒತ್ತುವರಿ ಮಾಡಿರುತ್ತಾರೆ. ನಾನು ಸರ್ವೇಯರ್ ಜೊತೆ ಶಾಮಿಲಾಗಿ ನನಗೆ ಬೇಕಾದ ರೀತಿ ನಕ್ಷೆ ಹಾಗೂ ವರದಿ ತಯಾರಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ದಾವಾ ಶೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಪಹಣಿಯು ಹಿಂದೆ ಅಂದರೆ 1998 ರಲ್ಲಿ ಕೇವಲ 1 ಎಕರೆ 24 ಗುಂಟೆ ಮಾತ್ರ ನಮ್ಮ ಕುಟುಂಬದ ಹೆಸರಿನಲ್ಲಿ ಕಂಡು ಬರುತ್ತಿತ್ತು ಎಂದರೆ ಸರಿಯಲ್ಲ. 2020 ರಲ್ಲಿ ನಾನೇ ಎಂ ಆರ್ ನಮೂದು ಮಾಡಿಸಿದ್ದು ಅದರ ಪ್ರಕಾರ ದಾವಾ ಎ ಸ್ವತ್ತು 2 ಎಕರೆ 9 ಗುಂಟೆ ನಮ್ಮ ಹೆಸರಿಗೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾವಾ ಬಿ ಸ್ವತ್ತಿನ ಸ್ವಾಧೀನಕ್ಕೆ ಅರ್ಹನಾಗಿರುವುದಿಲ್ಲ ಎಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ ನ್ಯಾಃ

ತರೀಕೆರೆ.

ಸಾಕ್ಷಿಯ ಸಹಿ: